**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 641/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - | ಲೋಕೇಶ | **ಚಾ.ಸಾ.-5** |
| **ತಂದೆಯ ಹೆಸರು** | - | ಲಿಂಗೇಗೌಡ | **ಫ್ರಾ.ಸಾ.-4** |
| **ವಯಸ್ಸು** | - | 40 ವರ್ಷ | |
| **ಉದ್ಯೋಗ** | - | ವ್ಯವಸಾಯ | |
| **ವಾಸಸ್ಥಳಃ** | - | ಯಮ್ಮನಹಳ್ಳಿ | |

ದಿನಾಂಕಃ 21.11.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ಸಾಕ್ಷಿಗೆ ಒಂದು ಸಹಿಯನ್ನು ತೋರಿಸಿ ಸಾಕ್ಷಿಯು ಸದರೀ ಸಹಿಯನ್ನು ನೋಡಿ ಗುರುತಿಸಿದ್ದು ಸದರೀ ಸಹಿಯಿರುವ ದಾಖಲಾತಿ ಮಹಜರ್ ಅಗಿದ್ದು ಅದನ್ನು ನಿ.ಪಿ. 8 ಎಂದು ಗುರುತಿಸಲಾಯಿತು ಸಾಕ್ಷಿಯ ಸಹಿಯನ್ನು ನಿ.ಪಿ.8(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಎರಡು ಫೋಟೋಗಳನ್ನು ತೋರಿಸಲಾಗಿ ಸದರೀ ಫೋಟೋಗಳಲ್ಲಿ ಅವರು ಇರುವುದನ್ನು ಗುರುತಿಸಿದ್ದು ಸದರೀ ಫೋಟೋಗಳನ್ನು ನಿ.ಪಿ. 9 ಮತ್ತು 10 ಎಂದು ಗುರುತಿಸಲಾಯಿತು, ನಿ.ಪಿ. 9 ಮತ್ತು 10 ಫೋಟೋಗಳನ್ನು ನಾನು ಗದ್ದೆಯಿಂದ ಬರುವಾಗ ಪೋಲೀಸರು ತೆಗೆದುಕೊಂಡಿರುತ್ತಾರೆ. ಈ ದಿನಾ ವಿ ಸಿ ಮುಖಾಂತರ ನ್ಯಾಯಾಲಯದ ಮುಂದೆ ಹಾಜರಿರುವ 1 ನೇ ಆರೋಪಿಯನ್ನು ನಾನು ಈ ಮೊದಲು ನೋಡಿರುವುದಿಲ್ಲ, ಹಾಗೂ ನಿ.ಪಿ. 8 ರಲ್ಲಿ ಏನು ಬರೆದಿರುತ್ತದೆಯೆಂದು ನನಗೆ ಗೊತ್ತಿಲ್ಲ. ಹಾಗೂ ನಿ.ಪಿ. 8 ಕ್ಕೆ ನನ್ನ ಜೊತೆ ಯಾರು ಸಹಿ ಮಾಡಿದರು ಎಂದು ನನಗೆ ಗೊತ್ತಿಲ್ಲ.

**( ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು. )**

**ಪಾಟೀ ಸವಾಲುಃ  ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ದಿನಾಂಕಃ 01.02.2020 ರಂದು ಆರೋಪಿಯು ಕೆಸ್ತೂರು ಕ್ರಾಸ್ ನಲ್ಲಿರುವ ಅರಣ್ಯ ಅಧಿಕಾರಿಯವರ ಕಛೇರಿಯ ಮುಂಭಾಗದಲ್ಲಿ ಇದೇ ಸ್ಥಳದಲ್ಲಿ ನಾನು ರಾಬರಿ ಮಾಡಿದ್ದು ಎಂದು ತೋರಿಸಿದ ಮೇರೆಗೆ ಸದರೀ ಸ್ಥಳದಲ್ಲಿ ನಿ.ಪಿ. 8 ರಂತೆ ಮಹಜರ್ ಮಾಡಿದ್ದರು ಎಂದರೆ ಸರಿ. ಸದರೀ ಮಹಜರ್ ನ್ನು ಮಧ್ಯಾಹ್ನ 03.30 ರಿಂದ 04.15 ಗಂಟೆಯವರೆಗೆ ಮಾಡಲಾಗಿರುತ್ತದೆಯೆಂದರೆ ಸರಿ. ಆ ಸಮಯದಲ್ಲಿ ನಿ.ಪಿ. 9 ಮತ್ತು 10 ರಂತೆ ಫೋಟೋವನ್ನು ತೆಗೆಯಲಾಗಿತ್ತು ಎಂದರೆ ಸರಿ, ಆಗ ಚಾ.ಸಾ. 4 ರವರು ಸಹಿ ಮಾಡಿರುತ್ತಾರೆಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು  ಡಿ ಎಸ್ ಕೆ ರವರಿಂದ**

ನಿ.ಪಿ. 8 ರಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ನಿ.ಪಿ. 8 ರಲ್ಲಿ ಬರೆದಿರುವ ವಿಚಾರವನ್ನು ಪೋಲೀಸರು ನನಗೆ ಓದಿ ಹೇಳಿರುವುದಿಲ್ಲ. ಪೋಲೀಸರು ನಿ.ಪಿ. 8 ನ್ನು ಠಾಣೆಯಲ್ಲಿಯೇ ಕುಳಿತು ಬರೆದು ನಾನು ಠಾಣೆಯಲ್ಲಿಯೇ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ನಾನು ಹೇಳುವ ರೀತಿ ನಿ.ಪಿ. 9 ಮತ್ತು 10 ನ್ನು ಈ ಪ್ರಕರಣಕ್ಕಾಗಿ ಪೋಲೀಸರು ಸೃಷ್ಟಿ ಮಾಡಿಕೊಂಡಿರುತ್ತಾರೆಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿ.ಪಿ. 8 ಕ್ಕೆ ನಾನು ಠಾಣೆಯಹಲ್ಲಿ ಸಹಿ ಮಾಡಿದ್ದರೂ ಸಹ ಸ್ಥಳದಲ್ಲಿ ಮಾಡಿದ್ದೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ,

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

1 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ                    ಮತ್ತು ಜೆ ಎಂ ಎಫ್ ಸಿ , ಮದ್ದೂರು.